ವರದಿಯನ್ನೊಪ್ಪಿಸುವುದು

ಶ್ರೀ ಬಿ.ಜಿ. ಕೊಟ್ರಪ್ಪ.—ಅಧೀನ ಶಾಸನ ರಚನಾ ಸಮಿತಿಯ ಮೊದಲನೆಯ ವರದಿಯನ್ನು ಸಭೆಯ ಮುಂದಿಡಬಯಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

೨–೩೦ ಪಿ.ಎಂ.

ಗಮನ ಸೆಳೆಯುವ ಸೂಚನೆ

ಬೆಂಗಳೂರಿನ ಶ್ರೀ ಸರ್ವಭೂಷಣ ಮಠದ ಉತ್ತರಾಧಿಕಾರಿ ನೇಮಕದಲ್ಲುಂಟಾದ ವಿವಾದದ ಬಗ್ಗೆ

ಶ್ರೀ ಕೆ.ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಶ್ರೀ ಸರ್ವಭೂಷಣ ಮಠದ ಉತ್ತರಾಧಿಕಾರಿ ನೇಮಕದಲ್ಲುಂಟಾದ ವಿವಾದದ ಬಗ್ಗೆ ಕಂದಾಯ ಹಾಗೂ ಯೋಜನಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಯೋಜನಾ ಹಾಗೂ ಕಂದಾಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ದಿನಾಂಕ ೨೫–೧–೧೯೮೬ ರಂದು ಬೆಂಗಳೂರು ನಗರದ ಕೆಂಪೇಗೌಡ ವೃತ್ತದಲ್ಲಿರುವ ಶ್ರೀ ಸರ್ವಭೂಷಣ ಮಠದ ಆವರಣದಲ್ಲಿ ಚಿತ್ರದುರ್ಗ ಶ್ರೀ ಮುರುಘರಾಜೇಂದ್ರ ಮಠದವರಿಗೂ ಮತ್ತು ಸರ್ವಭೂಷಣ ಮಠದವರಿಗೂ ವ್ಯಾಜ್ಯ ನಡೆದಿರುವುದು ನಿಜ. ಈ ಇಬ್ಬರು ಸ್ವಾಮಿಯವರು ದೂರು ಮತ್ತು ಪ್ರತಿ ದೂರನ್ನು ಉಪ್ಪಾರಪೇಟೆ ಆರಕ್ಷಕ ಠಾಣೆಗೆ ನೀಡಿದ್ದಾರೆ. ಆರಕ್ಷಕರು ಈ ಇಬ್ಬರು ಸ್ವಾಮಿಗಳವರನ್ನು ಮತ್ತು ಅವರ ಅನುಯಾಯಿಗಳಾದ ೧೨ ಮಂದಿಯನ್ನು ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಲಾಗಿ ಮ್ಯಾಜಿಸ್ಟ್ರೇಟರು ಅವರಿಂದ ಜಾಮೀನು ಮೇಲೆ ಬಿಡುಗಡೆ ಮಾಡಿರುತ್ತಾರೆ. ಇಬ್ಬರು ಸ್ವಾಮಿಗಳು ಸಲ್ಲಿಸಿರುವ ದೂರು ಮತ್ತು ಪ್ರತಿ ದೂರು ತನಿಖೆಯ ಹಂತದಲ್ಲಿವೆ.

ಈ ವಿಷಯದ ಬಗ್ಗೆ ಸರ್ವಭೂಷಣ ಮಠದ ಸ್ವಾಮಿಯವರನ್ನು (ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರು) ವಿಚಾರಿಸಲಾಗಿ ಅವರು ಹೇಳಿದ್ದೇನೆಂದರೆ ಸರ್ವಭೂಷಣ ಮಠದ ಹಿಂದಿನ ಸ್ವಾಮಿಗಳಾದ ಶ್ರೀ ಶಿವಕುಮಾರ ಸ್ವಾಮಿಗಳು ದಿನಾಂಕ ೨೦–೧೧–೧೯೮೫ ರಂದು ಮೋಟಾರು ವಾಹನದ ಅಪಘಾತದಲ್ಲಿ ಮೃತರಾದರು. ಅವರು ತಮ್ಮ ಮರಣಪೂರ್ವದ ಶಾಸನದಲ್ಲಿ ೫ ಜನರ ಮಂಡಲಿಯನ್ನು ಈ ಶಾಸನ ನಿರ್ವಾಹಕರೆಂದು ನಿಯೋಜಿಸಿದ್ದಾರೆ. ಈ ೫ ಜನ ನಿರ್ವಾಹಕರು ಮತ್ತು ಭಕ್ತಾಧಿಗಳು ದಿನಾಂಕ ೧೫–೧–೮೬ ರಂದು ತಮ್ಮನ್ನು ಸರ್ವಭೂಷಣ ಮಠಕ್ಕೆ ಪೀಠಾಧಿಕಾರಿಯನ್ನಾಗಿ ನೇಮಿಸಿದರು ಎಂದು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಮತ್ತೂ ಹೇಳಿದ್ದೇನೆಂದರೆ ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಮಠಕ್ಕೂ ಮತ್ತು ಶ್ರೀ ಸರ್ವಭೂಷಣ ಮಠಕ್ಕೂ ಬಹಳ ಕಾಲದಿಂದ ವ್ಯಾಜ್ಯ ನಡೆದು ೧೯೪೧ರಲ್ಲಿ ರಾಜ್ಯದ ಹೈಕೋರ್ಟ್, ಚಿತ್ರದುರ್ಗದ ಮುರುಘರಾಜೇಂದ್ರ ಮಠದವರಿಗೆ ಸರ್ವಭೂಷಣ ಮಠದ ಮೇಲೆ ಯಾವುದೇ ಹಕ್ಕಿಲ್ಲವೆಂದು ತೀರ್ಪು ನೀಡಿದೆ ಎಂದು ತಿಳಿಸಿದ್ದಾರೆ. ಇದಾದ ಸ್ವಲ್ಪ ಸಮಯದ ನಂತರ ಎರಡೂ ಮಠದ ಸ್ವಾಮಿಗಳ ಮಧ್ಯದಲ್ಲಿ ರಾಜೀ ಉಂಟಾಯಿತು. ಈ ರಾಜೀ ಸರ್ವಭೂಷಣ ಮಠದ ಭಕ್ತಾಧಿಗಳಿಗೆ ಒಪ್ಪಿಗೆ ಆಗದಿದ್ದುದರಿಂದ ಅವರು ಸಿವಿಲ್ ಮೊಕದ್ದಮೆಯನ್ನು ಹೂಡಿದ್ದಾರೆ. ಈ ಮೊಕದ್ದಮೆ ಸಿವಿಲ್ ಜಡ್ಜರ ಮುಂದಿವೆ.

ಸರ್ಕಾರದ ಹತ್ತಿರ ಇದ್ದ ಮಾಹಿತಿಯ ಆಧಾರದ ಮೇಲೆ ಚಿತ್ರದುರ್ಗದ ಮುರುಘರಾಜೇಂದ್ರ ಮಠದವರು ತಮಗೆ ಸರ್ವಭೂಷಣ ಮಠದ ಉತ್ತರಾಧಿಕಾರಿಯ ಹೆಸರನ್ನು ಸೂಚಿಸಲು ಹಕ್ಕಿದೆಯೆಂದು ವಾದಿಸಿದ್ದಾರೆ. ಅದೇ ಪ್ರಕಾರ ಶ್ರೀ ಶಿವಕುಮಾರ ಸ್ವಾಮಿಯವರು ನಿಧನದ ನಂತರ ತಾವು ಓರ್ವರ ಹೆಸರನ್ನು ಉತ್ತರಾಧಿಕಾರಿಯ ಸ್ಥಾನಕ್ಕೆ ಸೂಚಿಸಿದ್ದು ಅದು ಸರ್ವಭೂಷಣ ಮಠದವರಿಗೆ ಒಪ್ಪಿಗೆ ಆಗಲಿಲ್ಲ. ಅದೇ ವ್ಯಾಜ್ಯಕ್ಕೆ ಮೂಲ ಕಾರಣ.